http://www.howtoexam.com

Total No. of Questions : 24 ]

**Code No. 30**

Total No. of Printed Pages : 16 ]

**March, 2010**

# ACCOUNTANCY

( Kannada and English Versions )

Time : 3 Hours 15 Minutes ] [ Max. Marks : 100

( Kannada Version )

## ಭಾಗ – A

ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು : $8 \times 2 = 16$

1. ವ್ಯವಹಾರದ ಸ್ಥಿತಿ ಪತ್ರಿಕೆ ತಯಾರಿಸುವ ಉದ್ದೇಶವೇನು ?

2. ಬದಲಾಗುವ ಬಂಡವಾಳ ಪದ್ಧತಿ ಎಂದರೇನು ?

3. ಪುನರ್‌ಮೌಲ್ಯ ಖಾತೆ ಎಂದರೇನು ?

4. ಪಾಲುಗಾರಿಕಾ ಸಂಸ್ಥೆಯ ವಿಸರ್ಜನೆ ಸಮಯದಲ್ಲಿ ಆಸ್ತಿಗಳ ಮಾರಾಟಕ್ಕೆ ರೋಜು ದಾಖಲೆ ಕೊಡಿ.

5. ಶೇರುಗಳ ಅಧಿಕ ವಂತಿಗೆ ಎಂದರೇನು ?

6. ಈ ಕೆಳಗಿನವುಗಳನ್ನು ಕಂಪನಿಯ ಆಢಾವೆ ಪತ್ರಿಕೆಯಲ್ಲಿ ಯಾವ ತಲೆಬರಹದ ಕೆಳಗೆ ತೋರಿಸುವಿರಿ ?

   a) ಬಿಡಿ ಉಪಕರಣಗಳು

   b) ಪಡೆಯದ ಲಾಭಾಂಶ

7. ಸವಕಳಿಯ ಮೂಲ ಬೆಲೆ ಪದ್ಧತಿ ಎಂದರೇನು ?

8. ಮೃತ್ಯುದತ್ತಿ ಎಂದರೇನು ?

9. ಗಣಕೀಕೃತ ಲೆಕ್ಕ ಪದ್ಧತಿ ಎಂದರೇನು ?

10. ಎರಡು ವಿಧಗಳ ಅಕೌಂಟಿಂಗ್ ಪ್ಯಾಕೇಜ್‌ಗಳನ್ನು ತಿಳಿಸಿ.

[ Turn over

Find best school for your studies in your area, for all standards and classes

http://www.howtoexam.com



## ಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು:
$3 \times 6 = 18$

11. ಸುರೇಶ ಒಂದು ಪಾಲುಗಾರಿಕೆ ಸಂಸ್ಥೆಯ ಪಾಲುಗಾರನಾಗಿದ್ದು, ತನ್ನ ಸ್ವಂತಕ್ಕೆ ಈ ಕೆಳಗಿನಂತೆ ಹಣವನ್ನು 31. 12. 2008 ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಬಳಸಿದ್ದಾನೆ :

| | | |
|---|---|---|
| ದಿನಾಂಕ | 01. 04. 2008 | ರೂ. 9,000 |
| ,, | 30. 06. 2008 | ರೂ. 6,000 |
| ,, | 01. 09. 2008 | ರೂ. 5,000 |
| ,, | 30. 11. 2008 | ರೂ. 7,000 |

ಗುಣಲಬ್ಧ ಪದ್ಧತಿಯ ಪ್ರಕಾರ ಸ್ವಂತ ವೆಚ್ಚದ ಮೇಲೆ ಶೇ. 8 ರಂತೆ ಬಡ್ಡಿಯನ್ನು ಲೆಕ್ಕ ಹಾಕಿ.

12. ಅನಿಲ್, ಭರತ್ ಮತ್ತು ಚಂದ್ರ ಇವರು ಪಾಲುಗಾರರಾಗಿದ್ದು ಅವರ ಲಾಭ-ನಷ್ಟದ ಪ್ರಮಾಣ 5 : 4 : 3 ಆಗಿರುತ್ತದೆ. ಅನಿಲ್ ನಿವೃತ್ತಿ ಹೊಂದುವನು. ಅನಿಲ್‌ನ ಲಾಭದ ಪಾಲಲ್ಲಿ ಭರತ್ $\frac{1}{4}$ ಭಾಗವನ್ನು ಮತ್ತು ಚಂದ್ರ $\frac{1}{6}$ ಭಾಗವನ್ನು ಪಡೆಯುತ್ತಾರೆ. ಭರತ್ ಮತ್ತು ಚಂದ್ರರ ಹೊಸ ಲಾಭ-ನಷ್ಟದ ಪ್ರಮಾಣವನ್ನು ಲೆಕ್ಕ ಹಾಕಿ.

13. ಪವನ್, ರಾಕೇಶ್ ಮತ್ತು ಸೋಹನ್ ಪಾಲುಗಾರರಾಗಿದ್ದು, ಅವರ ಲಾಭ-ನಷ್ಟಗಳ ಪ್ರಮಾಣ 3 : 2 : 1 ರಂತೆ ಇದೆ. ದಿನಾಂಕ 01. 01. 2008 ರಂದು ಅವರು ಅನುಕ್ರಮವಾಗಿ ರೂ. 45,000, ರೂ. 30,000 ಮತ್ತು ರೂ. 20,000 ಬಂಡವಾಳವನ್ನು ಹೊಂದಿರುತ್ತಾರೆ.

ದಿನಾಂಕ 30. 09. 2008 ರಂದು ರಾಕೇಶ್ ನಿಧನ ಹೊಂದಿದನು. ಪಾಲುಗಾರಿಕೆಯ ಒಪ್ಪಂದ ಈ ಕೆಳಗಿನ ಅಂಶಗಳನ್ನೊಳಗೊಂಡಿದೆ :

a) ಪಾಲುಗಾರರ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 10.

b) ರಾಕೇಶನ ಮಾಸಿಕ ಸಂಬಳ ರೂ. 800

c) ಮೃತ ಪಾಲುಗಾರನ ವಾರಸುದಾರರ ಕೀರ್ತಿಮೌಲ್ಯದ ಪಾಲು.

d) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದವರೆಗಿನ ಪಾಲನ್ನು ಪಡೆಯಬಹುದು.

i) ಸಂಸ್ಥೆಯ ಕೀರ್ತಿಮೌಲ್ಯ ರೂ. 27,000.

ii) 2007 ರ ಸಂಸ್ಥೆಯ ಲಾಭ ರೂ. 15,000.

ರಾಕೇಶನ ಬಂಡವಾಳ ಖಾತೆಯನ್ನು ತಯಾರಿಸಿ.

14. ವರುಣ್ ಕಂಪನಿ ನಿಯಮಿತ ರೂ. 100 ಮೌಲ್ಯದ 500 ಶೇರುಗಳನ್ನು ಅವುಗಳ ಮೇಲೆ ರೂ. 25 ರಂತೆ ಅಂತಿಮ ಕರೆಯ ಹಣ ಪಾವತಿಯಾಗದಿದ್ದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ನಂತರ ಈ ಶೇರುಗಳನ್ನು ಪ್ರತಿ ಶೇರಿಗೆ ರೂ. 90 ರಂತೆ ಮರುಬಿಡುಗಡೆ ಮಾಡಿತು.

ಅವಶ್ಯವಿರುವ ರೋಜು ದಾಖಲೆಗಳನ್ನು ಬರೆಯಿರಿ.

15. ಗಣಕೀಕೃತ ಲೆಕ್ಕ ಮಾಡುವಿಕೆಯ ಆರು ಅನುಕೂಲತೆಗಳನ್ನು ತಿಳಿಸಿ.

Find best school for your studies in your area, for all standards and classes

http://www.howtoexam.com



## ಭಾಗ – C

ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು : 4 × 14 = 56

16. ಅರುಣರವರು ತಮ್ಮ ಸಂಸ್ಥೆಯ ಲೆಕ್ಕ ಪತ್ರಗಳನ್ನು ಏಕ ನಮೂದು ಪದ್ಧತಿಯಲ್ಲಿ ಇಟ್ಟಿರುತ್ತಾರೆ. ಅವರು ಈ ಕೆಳಗಿನ ಮಾಹಿತಿಯನ್ನು ನೀಡಿದ್ದಾರೆ :

| ***ವಿವರಗಳು*** | **01. 01. 2008**<br>***ರೂ.*** | **31. 12. 2008**<br>***ರೂ.*** |
|---|---|---|
| ನಗದು | 8,500 | 9,600 |
| ಬ್ಯಾಂಕಿನಲ್ಲಿ ನಗದು | 14,000 | 16,400 |
| ಸರಕು | 25,000 | 31,000 |
| ಋಣಿಗಳು | 16,000 | 20,000 |
| ಧನಿಗಳು | 10,400 | 7,500 |
| ಕೊಡತಕ್ಕ ಹುಂಡಿಗಳು | 3,100 | — |
| ಹೂಡಿಕೆಗಳು | — | 6,500 |
| ಪೀಠೋಪಕರಣ | 15,000 | 15,000 |
| ಕಟ್ಟಡ | 60,000 | 60,000 |

ವರ್ಷದಲ್ಲಿ ಅರುಣರವರು ಸ್ವಂತ ವೆಚ್ಚಕ್ಕೆ ರೂ. 9,000 ತೆಗೆದುಕೊಂಡರು. ದಿನಾಂಕ 01. 05. 2008 ರಂದು ಅವರು ರೂ. 15,000 ಗಳನ್ನು ಹೆಚ್ಚುವರಿ ಬಂಡವಾಳವಾಗಿ ತಂದಿರುತ್ತಾರೆ.

*ಹೊಂದಾಣಿಕೆಗಳು :*

a) ಪೀಠೋಪಕರಣದ ಮೇಲೆ ಶೇ. 20 ರಂತೆ ಸವಕಳಿ ತೆಗೆಯಿರಿ.

b) ಕಟ್ಟಡಗಳ ಮೌಲ್ಯವನ್ನು ಶೇ. 15 ರಂತೆ ಹೆಚ್ಚಿಸಿ.

c) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 6 ರಂತೆ ಅನುಮತಿಸಿ.

d) ಸಂಶಯಾಸ್ಪದ ಸಾಲಕ್ಕಾಗಿ ಋಣಿಗಳ ಮೇಲೆ ಶೇ. 5 ರಂತೆ ಮೀಸಲು ತೆಗೆಯಿರಿ.

e) ಪಾವತಿಸಬೇಕಾದ ಸಂಬಳ ರೂ. 4,500.

f) ಬರಬೇಕಾದ ಬಾಡಿಗೆ ರೂ. 1,100.

*ತಯಾರಿಸಿ :*

i) ವ್ಯವಹಾರದ ಸ್ಥಿತಿ ಪಟ್ಟಿ

ii) ಲಾಭ ಅಥವಾ ನಷ್ಟ ಪಟ್ಟಿ

iii) ಪುನರ್‌ವಿಮರ್ಶಿತ ಸ್ಥಿತಿ ಪಟ್ಟಿ



Find best school for your studies in your area, for all standards and classes

http://www.howtoexam.com



17. ರತನ್ ಮತ್ತು ಸೂರಜ್ ಪಾಲುಗಾರರಾಗಿದ್ದು, ಲಾಭ-ನಷ್ಟಗಳನ್ನು 3 : 2 ರ ಪ್ರಮಾಣದಲ್ಲಿ ಹಂಚಿಕೊಳ್ಳುವರು. ದಿನಾಂಕ 31. 12. 2008 ರಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.

***ದಿನಾಂಕ 31. 12. 2008 ರ ಆಢಾವೆ ಪತ್ರಿಕೆ***

| *ಹೊಣೆಗಾರಿಕೆಗಳು* | *ರೂ.* | *ಆಸ್ತಿಗಳು* | *ರೂ.* |
|---|---|---|---|
| ಧನಿಗಳು | 13,500 | ನಗದು | 6,500 |
| ಕೊಡತಕ್ಕ ಹುಂಡಿಗಳು | 7,500 | ಸರಕು | 21,000 |
| ಮೀಸಲು ನಿಧಿ | 15,000 | ಋಣಿಗಳು | 18,000 |
| *ಬಂಡವಾಳ :* | | ಬರತಕ್ಕ ಹುಂಡಿ | 5,500 |
| ರತನ್ ರೂ. 60,000 | | ಪೀಠೋಪಕರಣ | 10,000 |
| ಸೂರಜ್ ರೂ. 30,000 | 90,000 | ಯಂತ್ರಗಳು | 24,000 |
| | | ಕಟ್ಟಡಗಳು | 40,000 |
| | | ಲಾಭ-ನಷ್ಟ ಖಾತೆ | 1,000 |
| | **1,26,000** | | **1,26,000** |

ವಿನೋದರಿಗೆ $\frac{1}{6}$ ಭಾಗ ಲಾಭಕ್ಕೆ ದಿನಾಂಕ 01. 01. 2009 ರಂದು ಈ ಕೆಳಗಿನ ಕರಾರುಗಳ ಮೇಲೆ ಪಾಲುಗಾರಿಕೆಗೆ ಪ್ರವೇಶ ನೀಡಲಾಯಿತು.

a) ಬಂಡವಾಳವಾಗಿ ರೂ. 20,000 ತರಬೇಕು.

b) ಕಟ್ಟಡಗಳ ಮೌಲ್ಯವನ್ನು ರೂ. 50,000 ಕ್ಕೆ ನಿಗದಿಗೊಳಿಸಿದೆ.

c) ಪೀಠೋಪಕರಣ ಮತ್ತು ಯಂತ್ರಗಳ ಮೇಲೆ ಅನುಕ್ರಮವಾಗಿ ಶೇ. 10 ಮತ್ತು ಶೇ. 5 ರಷ್ಟು ಸವಕಳಿ ತೆಗೆಯಿರಿ.

d) ಋಣಿಗಳ ಮೇಲೆ ಶೇ. 10 ರಷ್ಟು ಸಂಶಯಾಸ್ಪದ ಸಾಲಕ್ಕಾಗಿ ಮೀಸಲಿಡಿ.

e) ಕೀರ್ತಿಮೌಲ್ಯ ಖಾತೆಯನ್ನು ರೂ. 25,000 ಕ್ಕೆ ಸೃಷ್ಟಿಸಿ, ಉಳಿಸಿಕೊಳ್ಳಬೇಕು.

*ತಯಾರಿಸಿ :*

i) ಪುನರ್‌ಮೌಲ್ಯ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ದಿನಾಂಕ 01. 01. 2009 ರ ಆಢಾವೆ ಪತ್ರಿಕೆ

Find best school for your studies in your area, for all standards and classes

http://www.howtoexam.com



18. ಮೋಹನ್, ನಾಗರಾಜು ಮತ್ತು ಪ್ರಕಾಶ್ ಪಾಲುಗಾರರಾಗಿದ್ದು, ಲಾಭ-ನಷ್ಟಗಳನ್ನು 4 : 3 : 2 ರ ಪ್ರಮಾಣದಂತೆ ಹಂಚಿಕೊಳ್ಳುತ್ತಾರೆ. ಅವರ ದಿನಾಂಕ 31. 12. 2008 ರ ಆಢಾವೆ ಪತ್ರಿಕೆ ಈ ಕೆಳಗಿನಂತಿತ್ತು :

**ದಿನಾಂಕ 31. 12. 2008 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಧನಿಗಳು | 25,000 | ನಗದು | 9,000 |
| ಕೊಡತಕ್ಕ ಹುಂಡಿಗಳು | 17,000 | ಋಣಿಗಳು | 27,000 |
| ಪ್ರಕಾಶನ ಸಾಲ ಖಾತೆ | 10,000 | ಸರಕು | 15,000 |
| ಮೀಸಲು ನಿಧಿ | 18,000 | ಹೂಡಿಕೆಗಳು | 5,000 |
| *ಬಂಡವಾಳಗಳು :* | | ಪೀಠೋಪಕರಣ | 14,000 |
| ಮೋಹನ್ ರೂ. 30,000 | | ಕೀರ್ತಿಮೌಲ್ಯ | 20,000 |
| ನಾಗರಾಜು ರೂ. 20,000 | | ಕಟ್ಟಡ | 40,000 |
| ಪ್ರಕಾಶ್ ರೂ. 10,000 | 60,000 | | |
| | **1,30,000** | | **1,30,000** |

ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಿದರು. ಆಸ್ತಿಗಳ ವಿಲೇವಾರಿ ಈ ಕೆಳಗಿನಂತೆ ಮಾಡಿದರು :

a) ಋಣಿಗಳಿಂದ ಶೇ. 10 ಪುಸ್ತಕದ ಮೌಲ್ಯಕ್ಕಿಂತ ಕಡಿಮೆ ಮತ್ತು ಹೂಡಿಕೆಗಳಿಂದ ಶೇ. 20 ಪುಸ್ತಕದ ಮೌಲ್ಯಕ್ಕಿಂತ ಅಧಿಕ ಹಣ ಬಂದಿದೆ. ಕಟ್ಟಡಗಳನ್ನು ರೂ. 60,000 ಕ್ಕೆ, ಸರಕುಗಳನ್ನು ರೂ. 12,000 ಕ್ಕೆ ಮತ್ತು ಪೀಠೋಪಕರಣಗಳನ್ನು ರೂ. 15,000 ಕ್ಕೆ ಮಾರಲಾಯಿತು.

b) ಕೀರ್ತಿಮೌಲ್ಯವನ್ನು ಮೋಹನ್ ರೂ. 15,000 ಕ್ಕೆ ತೆಗೆದುಕೊಂಡನು.

c) ಧನಿಗಳು ಮತ್ತು ಕೊಡತಕ್ಕ ಹುಂಡಿಗಳನ್ನು ಶೇ. 5 ಸೋಡಿಯ ಪ್ರಕಾರ ಪಾವತಿಸಿದೆ.

d) ವಿಲೇವಾರಿ ವೆಚ್ಚ ರೂ. 2,000.

*ತಯಾರಿಸಿ :*

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ನಗದು ಖಾತೆ

19. ದಿನಾಂಕ 01. 01. 2005 ರಂದು ಸಂಸ್ಥೆ ಒಂದು ಆಸ್ತಿಯನ್ನು ರೂ. 50,000 ಗಳಿಗೆ 4 ವರ್ಷಗಳ ಅವಧಿಗೆ ಗುತ್ತಿಗೆಯಾಗಿ ಖರೀದಿಸಿತು. ಈ ಗುತ್ತಿಗೆ ಪಡೆದ ಆಸ್ತಿಯ ಮೇಲೆ ಶೇ. 5 ಬಡ್ಡಿ ಸಹಿತವಾಗಿ ವರ್ಷಾಸನ ಪದ್ಧತಿಯಲ್ಲಿ ಸವಕಳಿ ತೆಗೆಯಲು ನಿರ್ಧರಿಸಿತು. ವರ್ಷಾಶನ ಕೋಷ್ಟಕದಂತೆ ರೂ. 1 ನ್ನು ಶೇ. 5 ರ ಬಡ್ಡಿ ಸಹಿತ 4 ವರ್ಷದ ಅವಧಿಗೆ ರೂ. 0·282012 ರಂತೆ ಸವಕಳಿ ತೆಗೆಯಬೇಕು.

ಗುತ್ತಿಗೆ ಆಸ್ತಿಯ ಖಾತೆ ಮತ್ತು ಬಡ್ಡಿ ಖಾತೆಯನ್ನು ಎಲ್ಲಾ ನಾಲ್ಕು ವರ್ಷಗಳಿಗೆ ತಯಾರಿಸಿ.



Find best school for your studies in your area, for all standards and classes

http://www.howtoexam.com



20. ಈ ಕೆಳಗಿನ ಆಢಾವೆ ಪತ್ರಿಕೆ ಮತ್ತು ಸ್ವೀಕೃತಿ ಮತ್ತು ಪಾವತಿ ಖಾತೆಯು ಡೈಮಂಡ್ ಸ್ಪೋರ್ಟ್ಸ್ ಕ್ಲಬ್, ದಾವಣಗೆರೆ – ಇವರಿಗೆ ಸಂಬಂಧಪಟ್ಟಿದೆ :

**ದಿನಾಂಕ 31. 12. 2007 ರ ಆಢಾವೆ ಪತ್ರಿಕೆ**

| *ಹೊಣೆಗಾರಿಕೆಗಳು* | *ರೂ.* | *ಆಸ್ತಿಗಳು* | *ರೂ.* |
|---|---|---|---|
| ಕೊಡತಕ್ಕ ಸಂಬಳ | 3,500 | ನಗದು | 10,500 |
| ಮುಂಗಡ ಪಡೆದ ವಂತಿಗೆ | 2,000 | ಕ್ರೀಡಾ ಸಾಮಗ್ರಿಗಳು | 25,000 |
| ಬಂಡವಾಳ ನಿಧಿ | 92,000 | ಪೀಠೋಪಕರಣ | 12,000 |
| | | ಭೂಮಿ ಮತ್ತು ಕಟ್ಟಡ | 50,000 |
| | **97,500** | | **97,500** |

**31. 12. 2008 ಕ್ಕೆ ಕೊನೆಗೊಳ್ಳುವ ಸ್ವೀಕೃತಿ ಮತ್ತು ಪಾವತಿ ಖಾತೆ**

| *ಸ್ವೀಕೃತಿ* | *ರೂ.* | *ಪಾವತಿ* | *ರೂ.* |
|---|---|---|---|
| ಗೆ ಆರಂಭಿಕ ಶಿಲ್ಕು | 10,500 | ಯಿಂದ ಸಂಬಳ | 23,000 |
| " ವಂತಿಗೆಗಳು | 42,000 | " ಕ್ರೀಡಾ ಸಾಮಗ್ರಿಗಳು | |
| " ಪ್ರವೇಶ ಶುಲ್ಕ | 5,000 | ( 01. 07. 2008 ) | 14,000 |
| " ಹಳೆ ಪತ್ರಿಕೆಗಳ ಮಾರಾಟ | 1,500 | " ಹೂಡಿಕೆಗಳು | 10,000 |
| " ಕ್ರೀಡಾ ಶುಲ್ಕ | 7,200 | " ಅಂಚೆ ವೆಚ್ಚ | 1,200 |
| | | " ವಿದ್ಯುಚ್ಛಕ್ತಿ ವೆಚ್ಚ | 2,300 |
| | | " ಮೈದಾನ ನಿರ್ವಹಣಾ ವೆಚ್ಚ | 4,500 |
| | | " ಅಂತಿಮ ಶಿಲ್ಕು | 11,200 |
| | **66,200** | | **66,200** |

*ಹೊಂದಾಣಿಕೆಗಳು :*

a) 2008 ನೇ ವರ್ಷಕ್ಕೆ ಬಾಕಿ ಬರಬೇಕಾದ ವಂತಿಗೆ ರೂ. 1,000.

b) ಸಂಬಳ ಬಾಕಿ 31. 12. 2008 ರಂದು ರೂ. 4,500.

c) ಅರ್ಧದಷ್ಟು ಪ್ರವೇಶ ಶುಲ್ಕವನ್ನು ಬಂಡವಾಳೀಕರಿಸುವುದು.

d) ಕ್ರೀಡಾ ಸಾಮಗ್ರಿಗಳ ಮೇಲೆ ವಾರ್ಷಿಕ ಶೇ. 20 ರಂತೆ ಹಾಗೂ ಪೀಠೋಪಕರಣದ ಮೇಲೆ ಶೇ. 5 ರಂತೆ ಸವಕಳಿ ತೆಗೆಯುವುದು.

*ತಯಾರಿಸಿ :*

i) ಆದಾಯ ಮತ್ತು ವೆಚ್ಚ ಖಾತೆ

ii) ಆಢಾವೆ ಪತ್ರಿಕೆ

Find best school for your studies in your area, for all standards and classes

http://www.howtoexam.com



21. ವಿಶ್ವಾಸ್ ವ್ಯಾಪಾರಿ ಕಂಪನಿ ನಿಯಮಿತ, ಇದರ ದಿನಾಂಕ 31. 12. 2008 ರ ತಾಳೆ ಪಟ್ಟಿ ಈ ಕೆಳಗಿನಂತಿದೆ :

**ದಿನಾಂಕ 31. 12. 2008 ರ ತಾಳೆ ಪಟ್ಟಿ**

| *ವಿವರಗಳು* | *ಖರ್ಚು* ( **Dr.**) ರೂ. | *ಜಮಾ* ( **Cr.**) ರೂ. |
|---|---|---|
| ಕರೆದ ಶೇರು ಬಂಡವಾಳ | — | 1,00,000 |
| ಬಾಕಿ ಕರೆಗಳು | 3,000 | — |
| ಸರಕು ( 01. 01. 2008 ) | 14,000 | — |
| ಖರೀದಿ ಮತ್ತು ಮಾರಾಟ | 55,000 | 1,40,000 |
| ವಾಪಸಾತಿಗಳು | 5,000 | 3,000 |
| ಸರಕು ಸಾಗಾಣಿಕೆ ವೆಚ್ಚ | 3,400 | — |
| ಕೂಲಿ | 11,600 | — |
| ಸಂಬಳ | 13,000 | — |
| ನಿರ್ದೇಶಕರ ಶುಲ್ಕ | 3,200 | — |
| ಅಂಚೆ ವೆಚ್ಚ | 1,300 | — |
| ಮುದ್ರಣ ವೆಚ್ಚ | 2,500 | — |
| ಸಾಮಾನ್ಯ ವೆಚ್ಚಗಳು | 4,500 | — |
| ಹೂಡಿಕೆ ಮೇಲಿನ ಬಡ್ಡಿ | — | 3,300 |
| ಮಧ್ಯಂತರ ಲಾಭಾಂಶ | 5,000 | — |
| ಹೂಡಿಕೆಗಳು | 15,000 | — |
| ಕೀರ್ತಿಮೌಲ್ಯ | 40,000 | — |
| ಕಟ್ಟಡ | 85,000 | — |
| ಯಂತ್ರೋಪಕರಣ | 30,000 | — |
| ಪೀಠೋಪಕರಣ | 16,000 | — |
| ಬರತಕ್ಕ ಹುಂಡಿ ಮತ್ತು ಕೊಡತಕ್ಕ ಹುಂಡಿ | 12,000 | 17,000 |
| ಋಣಿಗಳು ಮತ್ತು ಧನಿಗಳು | 24,000 | 15,200 |
| ಸಾಲಪತ್ರಗಳು | — | 50,000 |
| ಮೀಸಲು ನಿಧಿ | — | 20,000 |
| ಲಾಭ-ನಷ್ಟ ವಿನಿಯೋಗ ಖಾತೆ | — | 12,000 |
| ಬ್ಯಾಂಕಿನಲ್ಲಿ ನಗದು | 17,000 | — |
| | **3,60,500** | **3,60,500** |

*ಹೊಂದಾಣಿಕೆಗಳು :*

a) ಅಂತಿಮ ಸರಕು ಶಿಲ್ಕು ರೂ. 15,000.

[ Turn over

Find best school for your studies in your area, for all standards and classes

http://www.howtoexam.com



b) ಸಂಬಳ ಪಾವತಿಸಲು ಬಾಕಿ ರೂ. 2,000.

c) ಯಂತ್ರೋಪಕರಣಗಳ ಮೇಲೆ ಶೇ. 10 ರಂತೆ ಮತ್ತು ಪೀಠೋಪಕರಣಗಳ ಮೇಲೆ ಶೇ. 5 ರಂತೆ ಸವಕಳಿ ತೆಗೆಯಿರಿ.

d) ತೆರಿಗೆಗಾಗಿ ರೂ. 12,000 ವನ್ನು ಕಾಯ್ದಿರಿಸಿ.

e) ಮೀಸಲು ನಿಧಿಗೆ ರೂ. 15,000 ವರ್ಗಾಯಿಸಿ.

f) ಪ್ರಸ್ತಾವಿತ ಲಾಭಾಂಶ ರೂ. 7,500.

ಅಂತಿಮ ಖಾತೆಗಳನ್ನು ತಯಾರಿಸಿ.

## ಭಾಗ – D

*( ಪ್ರಾಯೋಗಿಕ ಪ್ರಶ್ನೆಗಳು )*

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು : $2 \times 5 = 10$

22. ಎರಡು ವಾರ್ಷಿಕ ಸಮನಾದ ಕಂತುಗಳ ಮೂಲಕ ಬಡ್ಡಿ ಸಹಿತ ಕೊನೆಗೊಳ್ಳುವಂತೆ ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ವಾರಸುದಾರನ ಸಾಲ ಖಾತೆಯನ್ನು ತಯಾರಿಸಿ.

23. ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ಎರಡು ವರ್ಷಕ್ಕೆ ಕಡಿಮೆಯಾಗುವ ಶಿಲ್ಕು ಪದ್ಧತಿಯ ಪ್ರಕಾರ ಯಂತ್ರ ಖಾತೆಯನ್ನು ತಯಾರಿಸಿ.

24. ಈ ಕೆಳಗಿನವುಗಳನ್ನು ಬಂಡವಾಳ ಮತ್ತು ಕಂದಾಯವಾಗಿ ವಿಂಗಡಿಸಿ :

a) ಪೀಠೋಪಕರಣಗಳ ಮಾರಾಟ

b) ಕಟ್ಟಡದ ವಾರ್ಷಿಕ ಸುಣ್ಣ ಮತ್ತು ಬಣ್ಣ ವೆಚ್ಚಗಳು

c) ಹಳೆ ವಾರ್ತಾಪತ್ರಿಕೆಗಳ ಮಾರಾಟ

d) ಕಟ್ಟಡ ನಿರ್ಮಾಣಕ್ಕೆ ಬಂದ ದೇಣಿಗೆಗಳು

e) ಸರಕಾರದಿಂದ ಪಡೆದ ವಾರ್ಷಿಕ ನಿರ್ವಹಣಾ ಅನುದಾನ

Find best school for your studies in your area, for all standards and classes

http://www.howtoexam.com

 Code No. 30

**( English Version )**

**SECTION – A**

Answer any *eight* questions, each carrying *two* marks. 8 × 2 = 16

1. What is the object of preparing the statement of affairs ?
2. What is fluctuating capital system ?
3. What is revaluation account ?
4. Give the journal entry for sale of assets on dissolution of partnership firm.
5. What is oversubscription of shares ?
6. Under what heading do the following items appear in the Company's Balance Sheet ?
   a) Loose tools
   b) Unclaimed dividend.
7. What is original cost method of depreciation ?
8. What are Legacies ?
9. What is computerised accounting ?
10. Mention two types of accounting packages.

**SECTION – B**

Answer any *three* questions, each carrying *six* marks. 3 × 6 = 18

11. Suresh, a partner in a firm has withdrawn the following amounts during the year ended 31. 12. 2008 for his personal use.

    Rs. 9,000 on 01. 04. 2008

    Rs. 6,000 on 30. 06. 2008

    Rs. 5,000 on 01. 09. 2008

    Rs. 7,000 on 30. 11. 2008

    Calculate the interest on drawings at 8% per annum under product method.

[ Turn over

HowToExam.com

Find best school for your studies in your area, for all standards and classes

http://www.howtoexam.com



12. Anil, Bharath and Chandra are partners sharing profits and losses in the ratio of 5 : 4 : 3. Anil retires. Bharath gets $\frac{1}{4}$th and Chandra gets $\frac{1}{6}$th of Anil's share. Calculate the new profit and loss sharing ratio of Bharath and Chandra.

13. Pavan, Rakesh and Sohan are partners sharing profits and losses in the ratio of 3 : 2 : 1. Their capital balances on 01 . 01. 2008 stood at Rs. 45,000, Rs. 30,000 and Rs. 20,000 respectively.

    Rakesh died on 30. 09. 2008. Partnership deed provides the following :

    a) Interest on capital at 10% per annum.

    b) Salary to Rakesh Rs. 800 per month.

    c) His share of goodwill.

    d) His share of profit upto the date of death on the basis of previous year's profit.

        i) Goodwill of the firm Rs. 27,000

        ii) Profits for the year 2007 Rs. 15,000

    Prepare Rakesh's Capital Account.

14. Varun Company Limited forfeited 500 shares of Rs. 100 each for non-payment of the final call money Rs. 25 per share. Later these shares were reissued at Rs. 90 per share.

    Give necessary Journal Entries.

15. Mention any *six* advantages of computerised accounting.

Find best school for your studies in your area, for all standards and classes

http://www.howtoexam.com



## SECTION – C

Answer any *four* from the following questions, each carrying *fourteen* marks : 4 × 14 = 56

16. Arun kept his books of account under single entry system. He gave the following information :

| Particulars | 01. 01. 2008<br>Rs. | 31. 12. 2008<br>Rs. |
|---|---|---|
| Cash | 8,500 | 9,600 |
| Cash at Bank | 14,000 | 16,400 |
| Stock | 25,000 | 31,000 |
| Debtors | 16,000 | 20,000 |
| Creditors | 10,400 | 7,500 |
| Bills payable | 3,100 | — |
| Investments | — | 6,500 |
| Furniture | 15,000 | 15,000 |
| Buildings | 60,000 | 60,000 |

During the year, he withdrew Rs. 9,000 for personal use. On 01. 05. 2008, he has introduced Rs. 15,000 as additional capital.

*Adjustments* :

a) Depreciate furniture by 20%

b) Appreciate buildings by 15%

c) Allow interest on capital at 6% per annum

d) Create reserve for doubtful debts at 5% on debtors

e) Outstanding salary Rs. 4,500

f) Rent receivable Rs 1,100

*Prepare* :

i) Statement of affairs

ii) Statement of profit or loss

iii) Revised statement of affairs.

[ Turn over

Find best school for your studies in your area, for all standards and classes

http://www.howtoexam.com



17. Ratan and Suraj are partners sharing profits and losses in the ratio of 3 : 2. Their Balance sheet as on 31. 12. 2008 was as follows :

**Balance Sheet as on 31. 12. 2008**

| **Liabilities** | | **Rs.** | **Assets** | **Rs.** |
|---|---|---|---|---|
| Creditors | | 13,500 | Cash | 6,500 |
| Bills Payable | | 7,500 | Stock | 21,000 |
| General Reserve | | 15,000 | Debtors | 18,000 |
| Capitals : | | | Bills Receivable | 5,500 |
| Ratan | Rs. 60,000 | | Furniture | 10,000 |
| Suraj | Rs. 30,000 | 90,000 | Machinery | 24,000 |
| | | | Buildings | 40,000 |
| | | | Profit and Loss A/c. | 1,000 |
| | | 1,26,000 | | 1,26,000 |

They admit Vinod to partnership for $\frac{1}{6}$th share on 01. 01. 2009 based on the following terms :

a) He should bring in Rs. 20,000 as capital

b) Buildings to be revalued at Rs. 50,000

c) Furniture and Machinery to be depreciated at 10% and 5% respectively

d) Reserve for doubtful debts to be provided at 10% on Debtors

e) Goodwill account to be raised and maintained to the extent of Rs. 25,000.

*Prepare* :

i) Revaluation Account

ii) Capital Accounts of Partners

iii) Balance Sheet as on 01. 01. 2009.

Find best school for your studies in your area, for all standards and classes

http://www.howtoexam.com



18. Mohan, Nagaraju and Prakash are partners sharing profits and losses in the ratio of 4 : 3 : 2 . Their Balance sheet as on 31. 12. 2008 was as follows :

**Balance Sheet as on 31. 12. 2008**

| Liabilities | | Rs. | Assets | Rs. |
|---|---|---|---|---|
| Creditors | | 25,000 | Cash | 9,000 |
| Bills Payable | | 17,000 | Debtors | 27,000 |
| Prakash's Loan A/c. | | 10,000 | Stock | 15,000 |
| Reserve Fund | | 18,000 | Investments | 5,000 |
| Capitals : | | | Furniture | 14,000 |
| Mohan | Rs. 30,000 | | Goodwill | 20,000 |
| Nagaraju | Rs. 20,000 | | Buildings | 40,000 |
| Prakash | Rs. 10,000 | 60,000 | | |
| | | 1,30,000 | | 1,30,000 |

On the above date the firm was dissolved. The assets realised as follows :

a) Debtors realised 10% less than the book value and investments realised 20% more than the book value. Buildings realised Rs. 60,000, stock realised Rs. 12,000 and furniture sold for Rs. 15,000.

b) Goodwill taken by Mohan at Rs. 15,000

c) Creditors and Bills payable settled at discount of 5%

d) Realisation expenses Rs. 2,000.

*Prepare* :

i) Realisation Account

ii) Capital Accounts of Partners

iii) Cash Account.

19. On 01. 01. 2005 a firm purchased a lease costing Rs. 50,000 for a term of 4 years. It is proposed to depreciate the lease by Annuity method charging 5% interest. With reference to Annuity tables to write off Re. 1 at 5% over a period of 4 years the amount to be charged is 0·282012.

Show Lease account and Interest account for all four years.



Find best school for your studies in your area, for all standards and classes

http://www.howtoexam.com



20. Following are the Balance sheet and Receipts and Payments A/c. of Diamond Sports Club, Davanagere.

**Balance Sheet as on 31. 12. 07**

| Liabilities | Rs. | Assets | Rs. |
|---|---|---|---|
| Outstanding Salary | 3,500 | Cash | 10,500 |
| Pre-received Subscriptions | 2,000 | Sports Materials | 25,000 |
| Capital Fund | 92,000 | Furniture | 12,000 |
| | | Land and Building | 50,000 |
| | 97,500 | | 97,500 |

**Receipts and Payments A/c for the year ended 31. 12. 08.**

| Receipts | Rs. | Payments | Rs. |
|---|---|---|---|
| To Balance b/d | 10,500 | By Salary | 23,000 |
| " Subscriptions | 42,000 | " Sports Materials ( 01. 07. 2008 ) | 14,000 |
| " Entrance Fees | 5,000 | " Investments | 10,000 |
| " Sale of old neswpapers | 1,500 | " Postage | 1,200 |
| " Sports Fees | 7,200 | " Electricity Charges | 2,300 |
| | | " Up-keep of Grounds | 4,500 |
| | | " Balance c/d | 11,200 |
| | 66,200 | | 66,200 |

*Adjustments* :

a) Outstanding subscription for 2008 Rs. 1,000

b) Outstanding salary as on 31. 12. 2008 Rs. 4,500

c) Half of the Entrance fees to be capitalised

d) Depreciate sports materials at 20% per annum and furniture at 5%.

*Prepare* :

i) Income and Expenditure Account

ii) Balance Sheet.

Find best school for your studies in your area, for all standards and classes

http://www.howtoexam.com



21. Following is the Trial Balance of Vishwas Trading Company Ltd. as on 31. 12. 2008 :

**Trial Balance as on 31. 12. 2008**

| Particulars | Debit Rs. | Credit Rs. |
|---|---|---|
| Called up Share Capital | — | 1,00,000 |
| Calls in Arrear | 3,000 | — |
| Stock ( 01. 01. 2008 ) | 14,000 | — |
| Purchases and Sales | 55,000 | 1,40,000 |
| Returns | 5,000 | 3,000 |
| Freight | 3,400 | — |
| Wages | 11,600 | — |
| Salaries | 13,000 | — |
| Director's Fees | 3,200 | — |
| Postage | 1,300 | — |
| Printing Charges | 2,500 | — |
| General Expenses | 4,500 | — |
| Interest on Investments | — | 3,300 |
| Interim Dividend | 5,000 | — |
| Investments | 15,000 | — |
| Goodwill | 40,000 | — |
| Buildings | 85,000 | — |
| Machinery | 30,000 | — |
| Furniture | 16,000 | — |
| Bills receivable and Bills payable | 12,000 | 17,000 |
| Debtors and Creditors | 24,000 | 15,200 |
| Debentures | — | 50,000 |
| Reserve Fund | — | 20,000 |
| Profit and Loss Appropriation A/c. | — | 12,000 |
| Cash at Bank | 17,000 | — |
| | 3,60,500 | 3,60,500 |

*Adjustments* :

a) Closing stock valued at Rs. 15,000

b) Outstanding salary Rs. 2,000

c) Depreciate machinery at 10% and Furniture at 5%

d) Make a provision for tax Rs. 12,000

e) Transfer Rs. 15,000 to Reserve fund

f) Proposed dividend Rs. 7,500.

Prepare Final Accounts.

[ Turn over

Find best school for your studies in your area, for all standards and classes

http://www.howtoexam.com



## SECTION – D

### ( Practical Oriented Questions )

Answer any *two* of the following questions. Each question carries *five* marks : $2 \times 5 = 10$

22. Prepare an Executor's Loan Account showing the repayment in two annual equal instalments along with interest with imaginary figures.

23. Prepare a Machinery Account for two years with imaginary figures under diminishing method of depreciation.

24. Classify the following items into Capital and Revenue :

a) Sale of furniture

b) Annual whitewashing and painting expenses to buildings

c) Sale of old newspapers

d) Donations for construction of buildings

e) Annual maintenance grant received from government.

HowToExam.com

Find best school for your studies in your area, for all standards and classes